‘ಕ್ಯಾಮರಾ ಫೇಸ್ ಮಾಡಿದ ಅನುಭವ ಇದೆಯಾ?’ ಕೇಳಿದರು. ‘ಸಾರ್... ಆದ್ರೆ...’ ತಡವರಿಸಿದಳು. ‘ಆಯ್ತು ಲಂಚ್ ನಂತರ ನೋಡೋಣ, ಎಲ್ಲೂ ಹೋಗ್ಬೇಡಿ ಇಲ್ಲೇಇರಿ’ ಅಂದರು. ಚಿತ್ರೀಕರಣ ನೋಡುತ್ತ ಕುಳಿತಳು. ಯುನಿಟ್‌ನವರ ಜೊತೆ ಇವಳಿಗೂ ಊಟಸಿಕ್ಕಿತು. ಹೀರೋ ಹೀರೋಯಿನ್‌ಗಳಿಗೆ ನೆರಳಿನಲ್ಲಿ ಟೇಬಲಿಟ್ಟು ಮುತುವರ್ಜಿಯಿಂದ ಉಪಚಾರ ನಡೆದಿತ್ತು. ನಿಮಿಷಕ್ಕೊಮ್ಮೆ ಮೇಕಪ್ಪು, ಕೇಳಿದಾಗ ಜ್ಯೂಸು. ಎಂತಾ ದರ್ಬಾರು! ತನಗೂ ಆ ಕಾಲ ಬರುತ್ತೇನೋ ಅಂತ ಯೋಚನೆಯಲ್ಲಿ ಮುಳುಗಿದಳು. ಮೂರುಗಂಟೆ ಹೊತ್ತಿಗೆ ನಿರ್ದೇಶಕರು ಕರೆದರು. ಅವಳನ್ನು ನಿರೀಕ್ಷಿಸಿ ‘ಇದೇ ಡ್ರೆಸ್ಸು ಸಾಕು. ಲೈಟ್ ಟಚ್‌ಅಪ್ ಕೊಡಿಸಿ’ ಅಂತ ಅಸಿಸ್ಟಂಟಿಗೆ ಹೇಳಿ ಮಾಡಿಸಿದರು. ‘ನೋಡು ಸುರಭಿ, ನೀನು ಹೀರೋಯಿನ್ನಳ ಆಪ್ತಗೆಳತಿ ಮತ್ತು ಕ್ಲಾಸ್ಮೇಟು ಕೂಡ. ಹೀರೋಯಿನ್ ಹೀರೋ ಜೊತೆ ಪಾರ್ಕಿನಲ್ಲಿ ಸಲ್ಲಾಪದಲ್ಲಿರೋವಾಗ ಅವಳ ಅಪ್ಪ ಬರುವುದು ಕಂಡು ನೀನು ಗಾಬರಿಯಿಂದ ಅಲ್ಲಿ ಹೋಗತೀಯ. ಅವರಿಬ್ರೂ ಒಟ್ಟಿಗಿರುವುದು ನೋಡಿ ಸ್ವಲ್ಪ ಸಂಕೋಚ ಪ್ರಕಟಿಸಿ, ‘ಶಮೂ... ನಿನ್ನಪ್ಪ ಇಲ್ಲೇ ಬರ್ತಿದಾರೆಯೇ!’ ಅಂತ ಎಚ್ಚರಿಸ್ತೀಯ, ಆಯ್ತಾ?’ ಅಂತ ಡೈಲಾಗನ್ನ ಎರಡುಮೂರು ಸಾರಿ ಓದಿಸಿ ಮನದಟ್ಟುಮಾಡಿಸಿ ಅವಳು ಸರಿ ಅಂದಮೇಲೆ ‘ಲೈಟ್’, ‘ಕ್ಯಾಮರಾ’, ‘ಆ್ಯಕ್ಷನ್’ ಶಬ್ದಗಳು ಬಂದವು. ಗಾಬರಿಯಿಂದ ತಕ್ಷಣ ಹೀರೋಯಿನ್ ಹತ್ತಿರ ಹೋದವಳಿಗೆ ಮಾತು ಮರೆತುಹೋಯ್ತು. ‘ಕಟ್’ ಅಂದವರು ಮತ್ತೆ ವಿವರಿಸಿ ಕಂಠಪಾಠ ಮಾಡಿಸಿದರು. ಆದರೆ ಓಕೆ ಆಗಲಿಲ್ಲ. ‘ಅಲ್ಲಮ್ಮ... ನೀನು ಆಪ್ತ ಗೆಳತಿಗೆ ಎಚ್ಚರಿಸೋದು. ರಾಣಿಗೆ ದಾಸಿ ಹೇಳಿದಂತಲ್ಲ’ ಅಂದರು. ಮೂರನೇದೂ ಹಾಗೇ ಆಯ್ತು. ‘ಸುರಭಿ ನೀನು ಸ್ಟೇಷನ್ನಲ್ಲಿ ಟ್ರೇನು ಬರೋದನ್ನ ಅನೌನ್ಸ್ ಮಾಡತಿದೀಯ. ಯಾಕೆ ಜಾತ್ರೆ ನಾಟಕಗಳನ್ನ ಜಾಸ್ತಿ ನೋಡತೀಯ?’ ಗದರಿದರು. ಹೇಗೆ ಅಂತ ಹೇಳಿ ತೋರಿಸಿದರು. ಮತ್ತೆರಡು ಟೇಕ್‌ಗಳೂ ಸರಿಯಾಗದಾಗ ಹೀರೋಯಿನ್‌ಳ ಮೂಡು ಹೊರಟುಹೋಯ್ತು. ಐದು ನಿಮಿಷ ಬ್ರೇಕ್ ಕೊಟ್ಟು, ಕಾಫಿ ಕುಡಿಸಿ ಮತ್ತೆ ಟಚ್‌ಅಪ್ ಆಗಿ ಬಂದಾಗ ಪುನಹ ಎಡವಟ್ಟಾಯ್ತು. ನಿರ್ದೇಶಕರು ತಾಳ್ಮೆ ಕಳೆದುಕೊಂಡರು. ‘ಎಲ್ಲಿಂದ ವಕ್ರಿಸಿಬಿಡತೀರೊ ನಟಿಸ್ತೀನಿ ಅಂತ. ಅಲ್ಲಮ್ಮಾ ತಾಯೀ, ನಿನ್ನಮ್ಮ ಮಾಡಬಾರದ ಕೆಲಸ ಮಾಡತಿದ್ರೆ ಅಪ್ಪ ಬರ್ತಿದಾರೆ ಅಂತ ಯಾವತ್ತೂ ಸೂಚನೆ ಕೊಟ್ಟಿಲ್ವ? ಅಪ್ಪನಿಗೇಕೊ ಸಿಟ್ಟು ಬಂದಂತಿದೆ ಅಮ್ಮ ಅಂತಾ ಯಾವತ್ತೂ ಪಿಸುದನೀಲಿ ಹೇಳಿಲ್ವ? ಅಷ್ಟು ದನಿ ತೆಗೆಯಕ್ಕಾಗಲ್ಲ ಅಂದ್ರೆ ಏನು ನಟಿಸ್ತೀರಾ ನಿಮ್ಮಲೆ?’ ಅಂತ ಚೆನ್ನಾಗಿ

**‘ನೋಡು ಸುರಭಿ, ಏನೂ ಹೆದ್ರಿಕೋಬೇಡ. ಅಭಿನಯ ಅಂದ್ರೆ ಹೀಗೇ ಅಂತ ಪುಸ್ತಕದ ಫಾರ್ಮುಲಾ ಅಲ್ಲ. ಅಥವಾ ಅನುಕರಣೆನೂ ಅಲ್ಲ. ಸಂದರ್ಭಗಳು ಬಂದಾಗ ನಾನು, ನೀನು ಎಲ್ರೂ ಸಹಜವಾಗಿ ಅದಕ್ಕೆ ತಕ್ಕ ಪ್ರತಿಕ್ರಿಯೆ ನೀಡತೀವಿ. ಇದು ಪ್ರತಿದಿನ, ಪ್ರತಿಕ್ಷಣ ನಡೀತಾನೆ ಇರುತ್ತೆ. ಅದನ್ನೇ ಇಲ್ಲಿ ಅಂತಹ ಸಂದರ್ಭವನ್ನು ನೈಜವಾಗಿ ಕಲ್ಪಿಸಿಕೊಂಡು ಪ್ರತಿಕ್ರಿಯಿಸಿದರಾಯ್ತು...’**